# ಸಾರ್ವಜನಿಕ ಜೀವನದಲ್ಲಿ ಮಾನವೀಯತೆಗೆ ಕೊರತೆಯೆ? ಜಡತೆ ಆವರಿಸಿಕೊಂಡಿದೆಯೆ?

ಸಾರ್ವಜನಿಕರೊಂದಿಗೆ ಒಡನಾಡುವವರು ಪ್ರಜ್ಞಾಪೂರ್ವಕವಾಗಿ ಸಾವಧಾನ–ಸೌಜನ್ಯ ರೂಢಿಸಿಕೊಳ್ಳಬೇಕು. 'ಸಾರ್ವಜನಿಕ ಸಭ್ಯತೆ' ತಮ್ಮ ವೃತ್ತಿಯ ಭಾಗ ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕು. ಆ ಸಭ್ಯತೆಯನ್ನು ಮರೆತಾಗ, ಪ್ರಶ್ನಿಸುವ ನೈತಿಕಶಕ್ತಿಯನ್ನು ಸಾರ್ವಜನಿಕರು ಬೆಳೆಸಿಕೊಳ್ಳಬೇಕು.

ಶಿಕ್ಷಣ ಸಚಿವ ಎಸ್. ಸುರೇಶ್‌ಕುಮಾರ್ ಅವರು ಕೆ.ಎಸ್.ಆರ್.ಟಿ.ಸಿ. ಬಸ್ಸೊಂದನ್ನು ಬೆನ್ನತ್ತಿ, ಮಕ್ಕಳನ್ನು ಹತ್ತಿಸಿಕೊಳ್ಳದ ಚಾಲಕ–ನಿರ್ವಾಹಕರಿಗೆ ಬುದ್ಧಿ ಹೇಳಿರುವ ಘಟನೆ ನಮಗೆ ಎರಡು ಸಂಗತಿಗಳನ್ನು ನೆನಪಿಸುವಂತಿದೆ. ಒಂದು, ಸಾರ್ವಜನಿಕ ಜೀವನದಲ್ಲಿ ಮಾನವೀಯ ಸಂವೇದನೆಗಳು ಎಷ್ಟರಮಟ್ಟಿಗೆ ಜಡವಾಗಿರುವುದನ್ನು. ಇಂಥ ಜಡತೆಯನ್ನು ಸಹಜ ಎನ್ನುವ ರೀತಿಯಲ್ಲಿ ಸಮಾಜ ಒಪ್ಪಿಕೊಂಡಿರುವ ಸಂಗತಿ ಎರಡನೆಯದು.

ಗ್ರಾಮೀಣ ಪ್ರದೇಶಗಳಲ್ಲಿ ಶಾಲಾ ಭೇಟಿ ಕೈಗೊಂಡಿದ್ದ ಸಮಯದಲ್ಲಿ, ಮಕ್ಕಳನ್ನು ನೋಡಿಯೂ ಬಸ್ ನಿಲ್ಲಿಸದೆ ಹೋದ ಚಾಲಕ–ನಿರ್ವಾಹಕರ ನಡವಳಿಕೆಯ ಬಗ್ಗೆ ಸಚಿವರು ದಿಗ್ಭ್ರಮೆಗೊಂಡಿದ್ದಾರೆ. ಅಷ್ಟುಮಾತ್ರಕ್ಕೆ ಅವರು ಸುಮ್ಮನಾಗಿಲ್ಲ, ಬಸ್ಸನ್ನು ಬೆನ್ನತ್ತಿ ಹೋಗಿ ನಿಲ್ಲಿಸಿ, ಚಾಲಕ–ನಿರ್ವಾಹಕರನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ಅವರ ಕಾಳಜಿ ಶ್ಲಾಘನೀಯ. ಅದೇಹೊತ್ತಿಗೆ, ಮಕ್ಕಳನ್ನು ಹತ್ತಿಸಿಕೊಳ್ಳದೆ ಹೋಗುವ ಬಸ್ ಸಿಬ್ಬಂದಿಯ ವರ್ತನೆಯನ್ನು ಪ್ರಶ್ನೆ ಮಾಡದ ಸಾರ್ವಜನಿಕರ ನಿರ್ಲಕ್ಷ್ಯ ಬಗ್ಗೆಯೂ ಯೋಚಿಸಬೇಕು. ಅನೇಕ ಸಂದರ್ಭಗಳಲ್ಲಿ ನಮ್ಮ ಕಣ್ಣೆದುರೇ ಮಕ್ಕಳನ್ನು ಹತ್ತಿಸಿಕೊಳ್ಳದೆ ಬಸ್‌ಗಳು ಮುಂದೆಹೋಗುತ್ತವೆ. ಅಂಥ ನಡವಳಿಕೆಯನ್ನು ಖಂಡಿಸಬೇಕೆಂದು ನಮಗೆ ಹೊಳೆಯುವುದಿಲ್ಲ. ಬಸ್ಸಿನೊಳಗಡೆ ಇರುವ ಪ್ರಯಾಣಿಕರು ಕೂಡ ಚಾಲಕ–ನಿರ್ವಾಹಕರನ್ನು ತರಾಟೆಗೆ ತೆಗೆದುಕೊಳ್ಳುವ ಗೋಜಿಗೆ ಹೋಗುವುದಿಲ್ಲ. ನಮ್ಮ ಬುಡಕ್ಕೆ ಬಾರದ ಹೊರತು ಊರಿನ ಉಸಾಬರಿ ನಮಗೆ ಬೇಕೆನ್ನಿಸುವುದಿಲ್ಲ.

ಮಕ್ಕಳ ಬಗೆಗೆ ಬಸ್ ನಿರ್ವಾಹಕ–ಚಾಲಕರ ನಿರ್ಲಕ್ಷ್ಯ ಗ್ರಾಮೀಣ ಪ್ರದೇಶಗಳಿಗೆ ಸೀಮಿತವಾದುದಲ್ಲ. ಬೆಂಗಳೂರಿನ ಬಿಎಂಟಿಸಿ ಬಸ್‌ಗಳಿಗೂ ಮಕ್ಕಳೆಂದರೆ ಅಲರ್ಜಿ. ಮಕ್ಕಳ ಗುಂಪು ಕಾಣಿಸಿದರೆ ಬಸ್‌ಗಳು ಕಣ್ಣಿ ಕಿತ್ತ ಕರುವಿನಂತೆ ತುಂಟಾಟವಾಡುತ್ತವೆ. ಹಾಗೂಹೀಗೂ ಮಕ್ಕಳು ಬಸ್ ಏರಿದರೆ, ಅವರ ಮೇಲೆ ಕಂಡಕ್ಟರ್ ಸಿಡಿಮಿಡಿ ಪ್ರಯಾಣದುದ್ದಕ್ಕೂ ಮುಂದುವರೆಯುತ್ತದೆ. ಸಹಪ್ರಯಾಣಿಕರಿಗೂ ಮಕ್ಕಳೆಂದರೆ ರೇಜಿಗೆ. ಅವರು ಕುಳಿತಿದ್ದರೆ ಆಸನ ಬಿಟ್ಟುಕೊಡುವಂತೆ ಇಲ್ಲವೇ ಒತ್ತರಿಸಿಕೊಂಡು ಕೂರುವಂತೆ ಒತ್ತಾಯಿಸುತ್ತಾರೆ.

ಮಕ್ಕಳನ್ನು ಕಂಡರೆ ಬಸ್ ಚಾಲಕ–ನಿರ್ವಾಹಕರಿಗೆ ಅಸಡ್ಡೆ ಏಕೆ? ಮಕ್ಕಳು ಪಾಸ್‌ದಾರರಾಗಿರುವುದು ನಿರ್ಲಕ್ಷ್ಯಕ್ಕೆ ಮೊದಲ ಕಾರಣ. ಪ್ರಯಾಣಿಕರೊಂದಿಗಿನ ಹಣಗಾಟದ ಒತ್ತಡವನ್ನು ತೀರಿಸಿಕೊಳ್ಳಲು ಚಾಲಕ–ನಿರ್ವಾಹಕರಿಗೆ ಮಕ್ಕಳು ಸುಲಭವಾಗಿ ಒದಗಿಬರುವುದು ಮತ್ತೊಂದು ಕಾರಣ. ಕೆಲವರಂತೂ ಮಕ್ಕಳನ್ನು ತಮ್ಮದೇ ಬಸ್‌ನಲ್ಲಿ ಉಚಿತವಾಗಿ ಕರೆದೊಯ್ಯುತ್ತಿರುವಂತೆ ವರ್ತಿಸುತ್ತಾರೆ. ಬಸ್‌ನಲ್ಲಿ ಮಕ್ಕಳು ಜೋರಾಗಿ ಮಾತನಾಡಿದರೆ, ಅವರ ಶಾಲಾಗುರುಗಳಿಗೂ ಪೋಷಕರಿಗೂ ಮಂಗಳಾರತಿಯಾಗುತ್ತದೆ. ಇದಕ್ಕೆ ವಿರುದ್ಧವಾಗಿ ಮಕ್ಕಳನ್ನು ಆಸ್ಥೆಯಿಂದ ಬಸ್ ಹತ್ತಿಸಿಕೊಳ್ಳುವ, ಗಲಾಟೆ ಮಾಡುವ ಮಕ್ಕಳಿಗೆ ಅಕ್ಕರೆಯಿಂದ ಬುದ್ಧಿಹೇಳುವ ಬಸ್ ಸಿಬ್ಬಂದಿಯೂ ಇದ್ದಾರೆ. ಅಂಥವರ ಸಂಖ್ಯೆ ತೀರಾ ಕಡಿಮೆ. ವಿಪರ್ಯಾಸವೆಂದರೆ, ಬೇರೆಯವರ ಮಕ್ಕಳೊಂದಿಗೆ ಒರಟಾಗಿ ವರ್ತಿಸುವವರು ತಮಗೂ ಮಕ್ಕಳಿದ್ದಾರೆ ಎನ್ನುವುದನ್ನು ಮರೆತುಬಿಡುವುದು.

ಎಳೆಯರು ಮಾತ್ರವಲ್ಲ, ಮಹಿಳೆಯರು ಹಾಗೂ ವೃದ್ಧರು ಕೂಡ ಸಾರ್ವಜನಿಕ ಜೀವನದಲ್ಲಿ ಅಲಕ್ಷ್ಯಕ್ಕೊಳಗಾಗುತ್ತಾರೆ. ಬಸ್ಸು, ರೈಲು ಹಾಗೂ ಸರ್ಕಾರಿ ಕಚೇರಿಗಳಲ್ಲಿನ ದೈನಂದಿನ ದೃಶ್ಯಗಳನ್ನು ನೋಡಿದರೆ ನಮ್ಮ ಸಂವೇದನೆ ಹೇಗೆ ಭ್ರಷ್ಟಗೊಂಡಿದೆಯೆನ್ನುವುದು ತಿಳಿಯುತ್ತದೆ. ಬಹುತೇಕ ಗಂಡಸರ ಕಣ್ಣುಗಳಿಗೆ ತಮ್ಮ ಕುಟುಂಬದ ಮಹಿಳೆಯರನ್ನು ಹೊರತುಪಡಿಸಿದರೆ ಉಳಿದವರೆಲ್ಲರೂ ಅಗ್ಗವಾಗಿಯೇ ಕಾಣಿಸುತ್ತಾರೆ. ಸಾರ್ವಜನಿಕ ಸಾರಿಗೆ ವಾಹನಗಳಲ್ಲಿ ಮೀಸಲು ಆಸನಗಳನ್ನು ಕೇಳುವ ಮಹಿಳೆಯರನ್ನು ಕೆಕ್ಕರಿಸಿ ನೋಡುವವರೇ ಹೆಚ್ಚು. ಉದ್ಯೋಗದ ಸ್ಥಳಗಳಲ್ಲೂ ಮಹಿಳೆಯರ ಸಾಮರ್ಥ್ಯವನ್ನು ಅವಕಾಶ ಸಿಕ್ಕಾಗಲೆಲ್ಲ ಎಗತಾಳಿ ಮಾಡಲಿಕ್ಕೆ ಸಹೋದ್ಯೋಗಿಗಳು ಕಾಯುತ್ತಿರುತ್ತಾರೆ. ವಾಸ್ತವವೆಂದರೆ, ಬಹುತೇಕ ಮಹಿಳೆಯರು ಕಚೇರಿಯೊಂದಿಗೆ ಗೃಹಕೃತ್ಯಗಳನ್ನೂ ನಿಭಾಯಿಸುವ ಆಲ್‌ರೌಂಡರ್‌ಗಳಾಗಿರುವುದು. ಆ ಸಾವಧಾನ ಮತ್ತು ಸಾಮರ್ಥ್ಯ ಇಲ್ಲದ ಪುರುಷಸಿಂಹಗಳು, ತಮ್ಮ ಹುಳುಕುಗಳನ್ನು ಮುಚ್ಚಿಟ್ಟುಕೊಳ್ಳಲು ಹೆಣ್ಣುಮಕ್ಕಳ ಮೇಲೆ ಹರಿಹಾಯುತ್ತಾರೆ. ಹಿರಿಯ ನಾಗರಿಕರ ಬಗ್ಗೆಯೂ ಈ ಅವಜ್ಞೆ ಮುಂದುವರೆಯುತ್ತದೆ. ಬ್ಯಾಂಕು, ಕಚೇರಿ ಸೇರಿದಂತೆ ಕಚೇರಿಗಳಿಗೆ ಎಡತಾಕುವ ಹಿರಿಯ ನಾಗರಿಕರು ಕೆಲವರ ಕಣ್ಣಿಗೆ ಸಾಮಾಜಿಕ ಒಜ್ಜೆಯಂತೆ ಕಾಣಿಸುತ್ತಾರೆ. ಬಸ್ಸು–ರೈಲುಗಳಲ್ಲಿ ನಿಂತಿರುವ ವೃದ್ಧರಿಗೆ ಸೀಟು ಬಿಟ್ಟು ಕೊಡುವ ಔದಾರ್ಯ ಕೆಲವರದಷ್ಟೇ ಆಗಿರುತ್ತದೆ.

ಸಾರ್ವಜನಿಕ ಜೀವನದಲ್ಲಿನ ಮಾನವೀಯವಾಗಿ ನಡೆದುಕೊಳ್ಳುವುದನ್ನು ಪ್ರಜ್ಞಾಪೂರ್ವಕವಾಗಿ ರೂಢಿಸಿಕೊಳ್ಳುವುದು ಇಂದಿನ ಅಗತ್ಯ. ಅದರಲ್ಲೂ ಸಾರ್ವಜನಿಕರೊಂದಿಗೆ ಹೆಚ್ಚು ಒಡನಾಡುವ ಪೊಲೀಸ್, ಸಾರಿಗೆ ನೌಕರರು ಹಾಗೂ ಬ್ಯಾಂಕ್–ಅಂಚೆ ಕಚೇರಿಗಳ ಸಿಬ್ಬಂದಿ ಹೆಚ್ಚು ಸೌಜನ್ಯ–ಸಾವಧಾನ ಹೊಂದಿರಬೇಕು. 'ಸಾರ್ವಜನಿಕ ಸಭ್ಯತೆ' ತಮ್ಮ ವೃತ್ತಿಯ ಭಾಗ ಎನ್ನುವುದನ್ನು ಅವರು ಅರ್ಥ ಮಾಡಿಕೊಳ್ಳಬೇಕು. ಸಾರ್ವಜನಿಕ ಸೇವೆಯಲ್ಲಿರುವವರು ಅಶಿಸ್ತು ತೋರಿಸಿದಾಗ ಅದನ್ನು ಪ್ರಶ್ನಿಸುವ, ಖಂಡಿಸುವ ನೈತಿಕಶಕ್ತಿಯನ್ನು ಸಾರ್ವಜನಿಕರೂ ಬೆಳೆಸಿಕೊಳ್ಳಬೇಕು.

■ ರಘುನಾಥ ಚ.ಹ.



ಈಶ್ವರ್